ಹೋದರೆ, ರೋಗಿಗಳನ್ನು ನೋಡುವುದಕ್ಕೆ ಟೈಂ ಇಲ್ಲ, ವಯಸ್ಸಾದವರು ಎಷ್ಟು ಸಾರಿ ಹೋಗುವುದಕ್ಕೆ ಸಾಧ್ಯ, ಅದೂ ಮೊದಲು ಬರುತ್ತಿದ್ದವರಿಗೆ ಈ ರೀತಿ harassment ಆಗುತ್ತಿದೆ 70–80 ವಯಸ್ಸು ದಾಟಿದವರು ಒಂದು ರೀತಿ ಶಾಪ ಹಾಕುತ್ತಿದ್ದಾರೆ, ಕೊಡುತ್ತಿದ್ದುದ್ದನ್ನೂ ಕೂಡ ಕೊಡುತ್ತಿಲ್ಲವಲ್ಲಾ ಎಂದು ಕೇಳುತ್ತಿದ್ದಾರೆ. ಇದು administrative lapse. ಏನೋ ನೀವು ಒಳ್ಳೆಯ ಉದ್ದೇಶದಿಂದ ಬೋಗಸ್ ಇರೋದನ್ನು ಹಿಡಿಯುವುದಕ್ಕೆ ಮಾಡಿದ್ದೀರಿ, ಆದರೆ ನಿಜವಾದವರಿಗೆ ತೊಂದರೆಯಾಗುತ್ತಿದೆ, ದಯವಿಟ್ಟು ಆಸ್ಪತ್ರೆಯವರಿಗೆ, ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟು, ಬಂದ ಜನರು ಕಾಯುವುದನ್ನು ತಪ್ಪಿಸಬೇಕು. ಈಗ ಅಂಗನವಾಡಿ ಟೀಚರ್ಸ್‌ಗೆ ಕೊಟ್ಟರು, ಅವರು ಇನ್ಯಾರಿಗೋ ಕೊಟ್ಟು ಮನೆಗಳ ಹತ್ತಿರ ಫಾರಂಗಳನ್ನು ಎಸೆದು ಬಂದರು, ವಾಪಸ್ ಕಲೆಕ್ಟ್ ಮಾಡಿಲ್ಲ, ನಿಮಗೆ ಬೇಕಾದರೆ ನಾನು ಸಬ್‌ಮಿಟ್ ಮಾಡುತ್ತೇನೆ. ಈ ರೀತಿಯಾಗಿ inspection ಆಗಿದೆ, ದಯವಿಟ್ಟು ಪ್ರಾಮಾಣಿಕವಾಗಿರುವವರಿಗೆ ವಂಚನೆಯಾಗಬಾರದು. ನಿಮ್ಮ ಉದ್ದೇಶ, ಬೋಗಸ್ ಇರುವವರನ್ನು ತೆಗೆಯುವುದು. we are first, ಅದಕ್ಕೋಸ್ಕರ ಎಲ್ಲಾ ಎಂಎಲ್‌ಎಗಳಿಗೆ ಯಾವುದು ರಿಜೆಕ್ಟ್ ಆಗಿದ್ದಾವೆಯೋ ದಯವಿಟ್ಟು ಕಳುಹಿಸಿ, ನಾವು ಕೊನೆಯಪಕ್ಷ ಇಂಥಿಂಥವರು ಫಲಾನುಭವಿಗಳೆಂದು ವೆಬ್‌ಸೈಟ್‌ನಲ್ಲಿ ಹೇಳುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : – ಮಾನ್ಯ ಅಧ್ಯಕ್ಷರೆ, ಖಂಡಿತವಾಗಿ ಆ ರೀತಿ ತೊಂದರೆಯಾದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ರಾಜು : – ಮಾನ್ಯ ಅಧ್ಯಕ್ಷರೆ, ರಾಮನಗರ ಜಿಲ್ಲೆಗೆ 6,800 ಅರ್ಜಿಗಳು ಬಂದಿವೆ. ಒಂದು ಜಿಲ್ಲೆಗೆ 1000 ನಿಗದಿ ಮಾಡಿದ್ದಾರೆ, ನಿಗದಿ ಮಾಡುವುದು ಬೇಡ, ಅರ್ಹತೆ ಆಧಾರದ ಮೇಲೆ ಕೊಡಬೇಕೆಂದು ದಯವಿಟ್ಟು ಮುಖ್ಯಮಂತ್ರಿಗಳಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏಕೆಂದರೆ ಅಲ್ಲಿ 1200 ಕೊಟ್ಟಿದ್ದಾರೆ, 16,000 ಅರ್ಜಿ ಇವೆ.

ಗಂಗಾಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳು

26 : (99)

ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಸರ್ಕಾರ ನಿಗದಿಪಡಿಸಿದ ಗುರಿ ಎಷ್ಟು?

ಆ) ಈ ಎರಡು ವರ್ಷಗಳಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು (ಪೂರ್ಣ ವಿವರ ನೀಡುವುದು) :

ಇ) ಕಳೆದ ಎರಡು ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು(ವಿವರಗಳನ್ನು ನೀಡುವುದು);

ಈ) ಕಳೆದ ಎರಡು ವರ್ಷಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯದೆ ಇರುವವರ ಸಂಖ್ಯೆ ಎಷ್ಟು ಹಾಗೂ ಕೊಳವೆ ಬಾವಿ ಕೊರೆಯದೆ ಇರಲು ಕಾರಣಗಳೇನು; ಉಳಿಕೆ ಕೊಳವೆ ಬಾವಿಗಳನ್ನು ಯಾವಾಗ ಕೊರೆಯಲಾಗುವುದು (ವಿವರಗಳನ್ನು ನೀಡುವುದು);

ಉ) ಈ ಯೋಜನೆಯಡಿ ಕೊಳವೆ ಬಾವಿ ಕೊರೆಯದೇ ಉಳಿಕೆಯಾಗಲು ಕಾರಣರಾದವರು ಅಧಿಕಾರಿಗಳೇ ಅಥವಾ ಗುತ್ತಿಗೆದಾರರೇ;

ಊ) ಗುತ್ತಿಗೆದಾರರು ಕಾರಣರಾಗಿದ್ದರೆ ಅವರನ್ನು ಕಪ್ಪು ಪಟ್ಟಿಗೆ ಸೇರಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯ ಮಂತ್ರಿಯವರು)

ಅ)

ವರ್ಷ	ಒಟ್ಟು ಗುರಿ
2009–10	5 ಭೌತಿಕ
2010–11	5 ಭೌತಿಕ
	10 ಭೌತಿಕ

ಆ) ಒಂಬತ್ತು. ಫಲಾನುಭವಿಗಳ ಪೂರ್ಣ ವಿವರಗಳನ್ನು ಅನುಬಂಧ 'A' ರಲ್ಲಿ ವಿವರಿಸಲಾಗಿದೆ.

ಇ) ಆರು. ವಿವರಗಳನ್ನು ಅನುಬಂಧ – B ರಲ್ಲಿ ವಿವರಿಸಲಾಗಿದೆ.

ಈ) ಮೂರು. ಆಯ್ಕೆಯಾದ ಫಲಾನುಭವಿಗಳು ನಿಯಮಾನುಸಾರ ಅಗತ್ಯ ದಾಖಲಾತಿಗಳನ್ನು ಸಲ್ಲಿಸದೇ ಇರುವ ಕಾರಣ ಕೊಳವೆಬಾವಿಗಳನ್ನು ಕೊರೆಯಲು ಸಾಧ್ಯವಾಗಿರುವುದಿಲ್ಲ.

ಆಯ್ಕೆಯಾದ ಫಲಾನುಭವಿಗಳು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ಕೂಡಲೇ ಕೊಳವೆಬಾವಿಗಳನ್ನು ಕೊರೆಯುವ ಬಗ್ಗೆ ಕ್ರಮವಹಿಸಲಾಗುವುದು. ಆಯ್ಕೆಯಾಗಿ ಕೊಳವೆಬಾವಿಗಳನ್ನು ಕೊರೆಯದೇ ಇರುವ ಫಲಾನುಬಾವಿಗಳನ್ನು ವಿವರಗಳ ಅನುಬಂಧ – C ರಲ್ಲಿ ಒದಗಿಸಲಾಗಿದೆ.

ಉ) ಯಾವುದೇ ಅಧಿಕಾರಿಗಳು ಅಥವಾ ಗುತ್ತಿಗೆದಾರರು ಕಾರಣರಲ್ಲ.

ಊ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ : 99 ಅನುಬಂಧ – A

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು

2009–10ನೇ ಸಾಲಿನ ಫಲಾನುಭವಿಗಳ ಪಟ್ಟಿ

ಕ್ರ.ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಸ.ನಂ.	ವಿಸ್ತೀರ್ಣ ಎ–ಗು	ಜಮೀನು ಇರುವ ಗ್ರಾ.
1	ಅಕ್ರಂ ಪಾಶ ಬಿನ್ ಸೈಯದ್ ಇಬ್ರಾಹಿಂ, ನಂದಿ ಗ್ರಾಮ, ಚಿಕ್ಕಬಳ್ಳಾಪುರ	76 76/1	1.00 1.14 2.14	ಕುಪ್ಪಹಳ್ಳಿ
2	ರಸೂಲಮ್ಮ ಕೋಂ ಪೀರುಸಾಬ್, ಪೇರೇಸಂದ್ರ, ಚಿಕ್ಕಬಳ್ಳಾಪುರ	131	3.30	ಪೇರೆಸಂದ್ರ
3	ಆರ್.ಎಸ್. ಫಕೃದ್ದೀನ್ ಬಿನ್ ಸೈಯದ್ ಸಾಬ್, ಮಂಡಿಕಲ್ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಾಬಳ್ಳಾಪುರ	1/3 6/2 10/2 87/2	1.08 0.30 0.13 0.10 2.21	ಕೇರುಮಾರಕನಹಳ್ಳಿ
4	ಹಬೀಬ್ ಸಾಬಿ ಬಿನ್ ಫಕೃದ್ದೀನ್ ಸಾಬ್, ಮಂಡಿಕಲ್ ಹೋಬಳಿ ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಾಬಳ್ಳಾಪುರ	318	2.06	ಮಂಡಿಕಲ್
5	ಸೈ. ರಹಮತುಲ್ಲಾ ಬಿನ್ ಮೌಲಸಾಬ, ಮಂಚನಬಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಾಬಳ್ಳಾಪುರ	11 83/2 20/4	0.34 1.00 0.23 2.17	ಮಂಚನಬಲೆ

2010–11ನೇ ಸಾಲಿನ ಫಲಾನುಭವಿಗಳ ಪಟ್ಟಿ

ಕ್ರ. ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಸ.ನಂ	ವಿಸ್ತೀರ್ಣ ಎ–ಗು	ಜಮೀನು ಇರುವ ಗ್ರಾ.
1	ಅಬ್ದುಲ್ ಷಕೂರು ಬಿನ್ ಬಂಡಿಬಾಬುಸಾಬಿ, ಪರೇಸಂದ್ರ, ಮಂಡಿಕಲ್ಲು ಹೋಬಳಿ ಚಿಕ್ಕಬಳ್ಳಾಪುರ	189	2.00	ಪೆರೆಸಂದ್ರ
2	ಬಾಬುಸಾಬಿ ಬಿನ್ ಬಡೇಸಾಬಿ, ಮಂಡಿಕಲ್ಲು ಗ್ರಾ. ಚಿಕ್ಕಬಳ್ಳಾಪುರ	27	2.04	ದೊಡ್ಡಹಳ್ಳಿ
3	ಯಾಸೀನ್ ಬಿನ್ ಅಮೀರ್ ಖಾನ್ ಚಾಮರಾಜಪೇಟೆ, ಚಿಕ್ಕಬಳ್ಳಾಪುರ	23	4.09	ನಾಸ್ತೀಮ್ಮನಹಳ್ಳಿ
4	ಬಿ.ಎಸ್. ರಫೀವುಲ್ಲಾ ಬಿನ್ ಲೇಟ್ ಶೂಕುರ್ ಸಾಬ್, ಎನ್.ಪಿ.ಓ ರಸ್ತೆ ಚಿಕ್ಕಬಳ್ಳಾಪುರ	7/10	2.00	ಪುಟ್ಟತಿಮ್ಮನಹಳ್ಳಿ

ಅನುಬಂಧ – B

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು 2009–10ನೇ ಹಾಗೂ 2010–11 ಸಾಲಿನಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾದ ಫಲಾನುಭವಿಗಳ ಪಟ್ಟಿ

ಕ್ರ. ಸಂ.	2009–2010
1	ಅಕ್ರಂ ಪಾಶ ಬಿನ್ ಸೈಯದ್ ಇಬ್ರಾಹಿಂ, ನಂದಿ ಗ್ರಾಮ, ಚಿಕ್ಕಬಳ್ಳಾಪುರ
2	ರಸೂಲಮ್ಮ ಕೋಂ ಪೀರುಸಾಬ್, ಪೇರೇಸಂದ್ರ, ಚಿಕ್ಕಬಳ್ಳಾಪುರ
3	ಆರ್.ಎಸ್. ಫಕೃದ್ದೀನ್ ಬಿನ್ ಸೈಯದ್ ಸಾಬ್, ಮಂಡಿಕಲ್ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಾಬಳ್ಳಾಪುರ
4	ಹಬೀಬ್ ಸಾಬಿ ಬಿನ್ ಫಕೃದ್ದೀನ್ ಸಾಬ್, ಮಂಡಿಕಲ್ ಹೋಬಳಿ ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಾಬಳ್ಳಾಪುರ
5	ಸೈ. ರಹಮತುಲ್ಲಾ ಬಿನ್ ಮೌಲಸಾಬ, ಮಂಚನಬಲೆ, ಚಿಕ್ಕಬಳ್ಳಾಪುರತಾಲ್ಲೂಕು, ಚಿಕ್ಕಾಬಳ್ಳಾಪುರ
	2010–11
6	ಅಬ್ದುಲ್ ಷಕೂರು ಬಿನ್ ಬಂಡಿಬಾಬುಸಾಬಿ, ಪರೇಸಂದ್ರ, ಮಂಡಿಕಲ್ಲು ಹೋಬಳಿ ಚಿಕ್ಕಬಳ್ಳಾಪುರ

ಅನುಬಂಧ – C

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು

2009–10ನೇ ಹಾಗೂ 2010–11 ಸಾಲಿನಲ್ಲಿ ಆಯ್ಕೆಯಾಗಿ ಕೊಳವೆಬಾವಿಗಳನ್ನು ಕೊರೆಯದೇ ಇರುವ ಫಲಾನುಭವಿಗಳ ಪಟ್ಟಿ

ಕ್ರ ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಸ.ನಂ	ವಿಸ್ತೀರ್ಣ ಎ–ಗು	ಜಮೀನು ಇರುವ ಗ್ರಾ.
1	ಬಾಬುಸಾಬಿ ಬಿನ್ ಬಡೇಸಾಬಿ, ಮಂಡಿಕಲ್ಲು ಗ್ರಾ. ಚಿಕ್ಕಬಳ್ಳಾಪುರ	27	2.04	ದೊಡ್ಡಹಳ್ಳಿ
2	ಯಾಸೀನ್ ಬಿನ್ ಅಮೀರ್ ಖಾನ್ ಚಾಮರಾಜಪೇಟೆ, ಚಿಕ್ಕಬಳ್ಳಾಪುರ	23	4.09	ನಾಸ್ತೀಮ್ಮನಹಳ್ಳಿ
3	ಬಿ.ಎಸ್. ರಫೀವುಲ್ಲಾ ಬಿನ್ ಲೇಟ್ ಶೂಕೂರ್ ಸಾಬ್, ಎನ್.ಪಿ.ಓ ರಸ್ತೆ ಚಿಕ್ಕಬಳ್ಳಾಪುರ	7/10	2.00	ಪುಟ್ಟತಿಮ್ಮನಹಳ್ಳಿ

ಶ್ರೀ ಕೆ.ಪಿ. ಬಚ್ಚೇಗೌಡ :– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಇದರಲ್ಲಿ ಕೆಲವು ಅಂಶಗಳು ಸತ್ಯಕ್ಕೆ ದೂರವಾದವು. ಏನೆಂದರೆ, ಅಗತ್ಯ ದಾಖಲಾತಿಗಳನ್ನು ಒದಗಿಸದೇ ಇರುವುದರಿಂದ ಕೊಳವೆಬಾವಿಯನ್ನು ಕೊರೆದಿಲ್ಲವೆಂದು ಹೇಳುತ್ತಾರೆ. ಫಲಾನುಭವಿಗಳ ಆಯ್ಕೆ ಸಂದರ್ಭದಲ್ಲೇ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡು ಫಲಾನುಭವಿಗಳ ಆಯ್ಕೆಯನ್ನು ಮಾಡುತ್ತಾರೆ. ಏಕೆಂದರೆ, ಆ ಸಮಿತಿಯ ಅಧ್ಯಕ್ಷ ನಾನೇ ಇರುವುದರಿಂದ ಆ ಬಗ್ಗೆ ನನಗೆ ಸ್ಪಷ್ಟವಾದ ಮಾಹಿತಿ ಇದೆ. ಇದಕ್ಕೆ ತೊಂದರೆ ಏನೆಂದರೆ, ನಮ್ಮಲ್ಲಿ ಈ ಒಂದು ನಿಗಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿ ಇಲ್ಲ. ಕಳೆದ 5–6 ತಿಂಗಳಿನಿಂದ ಬೇರೆ ಜಿಲ್ಲೆಯ ಅಧಿಕಾರಿಗೆ ಉಸ್ತುವಾರಿ ಹಾಕಿರುವುದರಿಂದ ಅವರು ಅಲ್ಲಿಗೆ ಬರುತ್ತಿಲ್ಲ, ಅಲ್ಲಿ ಉಸ್ತುವಾರಿ ನೋಡುವ ಅಧಿಕಾರಿಗಳ ಕೊರತೆ ಇರುವುದರಿಂದ ಈ ತೊಂದರೆಗಳಾಗುತ್ತಿವೆ. ಜೊತೆಗೆ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳಿಂದ ತ್ವರಿತವಾಗಿ ವಿದ್ಯುದ್ದೀಕರಣವಾಗದೇ ಇರುವುದರಿಂದ ಅನುಷ್ಠಾನದಲ್ಲಿ ತೊಡಕುಂಟಾಗುತ್ತಿದೆ ಎನ್ನುವುದನ್ನು ಕೂಡ ಉತ್ತರದಲ್ಲಿ ಕೊಟ್ಟಿದ್ದಾರೆ. ಇದು ಸರ್ಕಾರದ ಕರ್ತವ್ಯವಾಗುತ್ತದೆ, ಸಂಬಂಧಪಟ್ಟ ವಿದ್ಯುತ್ ಕಂಪನಿಗಳಿಗೆ ಶೀಘ್ರವಾಗಿ ವಿದ್ಯುತ್ ಒದಗಿಸುವ ವ್ಯವಸ್ಥೆ ಮಾಡುವುದಕ್ಕೆ ಸಂಬಂಧಪಟ್ಟವರಿಗೆ ಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು. ಅದೇ ರೀತಿ ಜಿಲ್ಲಾಮಟ್ಟದಲ್ಲಿ ಚಿಕ್ಕಬಳ್ಳಾಪುರದಲ್ಲೇ ಇರುವ ಬೇರೆ ಅಧಿಕಾರಿಗೆ ಆ ಒಂದು ಅಧಿಕಾರವನ್ನು

ವಹಿಸಕೊಡಬೇಕಾಗುತ್ತದೆ. ಏಕೆಂದರೆ, ಇವತ್ತು ತುಮಕೂರಿನ ಅಧಿಕಾರಿಯನ್ನು ನಮ್ಮ ಜಿಲ್ಲೆಗೆ ಹಾಕಿದ್ದಾರೆ, ತುಮಕೂರಿನಿಂದ ಚಿಕ್ಕಬಳ್ಳಾಪುರಕ್ಕೆ ಅವರು ಬರುತ್ತಿಲ್ಲ. ಈ ಒಂದು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ವರ್ಷ ಯಾವೊಬ್ಬ ಫಲಾನುಭವಿಯನ್ನು ನಾವು ಆಯ್ಕೆ ಮಾಡುವುದಕ್ಕಾಗಲಿಲ್ಲ. ಅಂದರೆ 2011–12ನೇ ಸಾಲು ಮುಗಿಯುತ್ತಿದೆ ಈ ವರ್ಷ ಯಾವೊಬ್ಬ ಫಲಾನುಭವಿಯನ್ನು ಆಯ್ಕೆ ಮಾಡಿಲ್ಲ, ಎಲ್ಲಾ ಸೌಲಭ್ಯಗಳಿಂದ ನನ್ನ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರು ವಂಚಿತರಾಗಿದ್ದಾರೆ, ದಯವಿಟ್ಟು, ಮಾನ್ಯ ಮುಖ್ಯಮಂತ್ರಿಗಳು ಆ ಕಡೆ ಗಮನಹರಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ :– ಮಾನ್ಯ ಅಧ್ಯಕ್ಷರೆ, 2009, 2010 ಮತ್ತು 2011ರಲ್ಲಿ ಈ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಎರಡು ವರ್ಷ ಕೂಡ ಐದೈದು ಗುರಿ ಹೊಂದಲಾಗಿತ್ತು, ಐದೈದು ಕೊಟ್ಟಿದ್ದೇವೆ. ಇದರಲ್ಲಿ ಪ್ರಾಯಶಃ ಇಲಾಖೆಯಿಂದ ತೊಂದರೆಯಾಗಿಲ್ಲ, ಬಾಕಿ ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ. ಆದರೆ ಮೂವರು ವ್ಯಕ್ತಿಗಳು ದಾಖಲಾತಿಗಳನ್ನು ನಮಗೆ ಸರಿಯಾಗಿ ಕೊಡದ ಕಾರಣ ಈ ಕೆಲಸಕಾರ್ಯಗಳು ನಿಂತಿವೆಯೇ ಹೊರತು, ಸರ್ಕಾರ ಮತ್ತೊಂದು ವತಿಯಿಂದ ನಿಂತಿಲ್ಲ. 10 ಜನರಲ್ಲಿ 3 ಜನ ಸರಿಯಾದ ದಾಖಲಾತಿಗಳನ್ನು ನಮಗೆ ಕೊಡದಿರುವ ಹಿನ್ನೆಲೆಯಲ್ಲಿ ಇದು ನಿಂತಿದೆ.

ಆದರೂ ಕೂಡ ಅವರನ್ನು ಮತ್ತೆ ಪರಿಶೀಲನೆ ಮಾಡುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡುತ್ತಿದ್ದೇವೆ. ಅದನ್ನು ಕೊಡಿಸುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ ಇದು ಒಂದನೆಯದು. ಎರಡನೆಯದಾಗಿ ತಾವು ಅಧಿಕಾರಿಗಳು ಸ್ವಲ್ಪ ಬೇರೆ ಕಡೆಯಿಂದ ಬರುವಂತಹ ಸಂದರ್ಭದಲ್ಲಿ ಸ್ವಲ್ಪ ವಿಳಂಬವಾಗುತ್ತದೆ, ತೊಂದರೆಯಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದೀರಿ, ಇದರ ಬಗ್ಗೆ ನಾವು ಪರಿಶೀಲನೆ ಮಾಡಿ ಮುಂದೆ ಆ ರೀತಿ ಆಗದ ಹಾಗೆ ನೋಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

ಶ್ರೀ ವೈ.ಎನ್ ರುದ್ರೇಶ್ ಗೌಡ :– ಮಾನ್ಯ ಸಭಾಧ್ಯಕ್ಷರೇ, ಕೊಳವೆ ಬಾವಿ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, 6 ಹೋಬಳಿಗಳಲ್ಲಿ 3 ಹೋಬಳಿಗಳು ಡ್ರೈ ಹೋಬಳಿಗಳು. ಇನ್ನು ಮೂರು ಹೋಬಳಿ ಮಲೆನಾಡು. ಅಧ್ಯಕ್ಷರೆ, ತಾವು ಮಲೆನಾಡಿನವರು. ತಾವು ಮಲೆನಾಡು ಭಾಗದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದೇ ಇಲ್ಲ. ಏನೇ ಇದ್ದರೂ ಖುಷ್ಕಿ ಜಾಗದಲ್ಲಿ ಕೊರೆಯುತ್ತಾರೆ ಹೊರತು ಮಲೆನಾಡಿನಲ್ಲಿ ನಮಗೆ ಆದಾಯವೇ ಇಲ್ಲ ಅಂತ ಹೇಳಿ ಮಲೆನಾಡು ಭಾಗದಲ್ಲಿ ಕೊರೆಯುವುದಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನ

ಹರಿಸಬೇಕು. ಮಲೆನಾಡು ಭಾಗದಲ್ಲಿಯೂ ಸಹ 19 ಬೋರ್‌ವೆಲ್‌ಗಳು ಬಾಕಿ ಇವೆ. ಇನ್ನು 19 ಬೋರ್‌ವೆಲ್‌ಗಳು ಸಂಪೂರ್ಣವಾಗಿ ಮಲೆನಾಡು ಪ್ರದೇಶದಲ್ಲಿವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಈಗ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದಾರೆ. ನೀವು ಎಲ್ಲವನ್ನು ಕೇಳಿದರೆ ಹೇಗೆ ಉತ್ತರ ಕೊಡುವುದು. ಇದು ಚಿಕ್ಕಬಳ್ಳಾಪುರಕ್ಕೆ ಸಂಬಂಧಪಟ್ಟ ಪ್ರಶ್ನೆ. ನೀವು ಇಡೀ ರಾಜ್ಯದ್ದು, ಕೇಳಿದರೆ ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೆ. ತಾವು ಉತ್ತರ ಹೇಳಿ.

ಶ್ರೀ ಕೆ.ಪಿ. ಬಚ್ಚೇಗೌಡ:– ಮಾನ್ಯ ಅಧ್ಯಕ್ಷರೆ, ಅಗತ್ಯ ದಾಖಲಾತಿಗಳನ್ನು ಕೊಟ್ಟ ನಂತರ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೀರಿ ಎನ್ನತಕ್ಕಂತಹ ಮಾತನ್ನು ನಾನು ಹೇಳಿದ್ದೇನೆ. ಜೊತೆಗೆ ಅಲ್ಲಿ ಅಧಿಕಾರಿಗಳ ಕೊರತೆಯಿರುವುದರಿಂದ ಇದು ವಿಳಂಬವಾಗುತ್ತಿದೆ ಎನ್ನತಕ್ಕ ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರತಕ್ಕಂತಹ ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮ ಇರಬಹುದು, ಬೇರೆ ಅಧಿಕಾರಿಗಳು ಬರುವವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅದರ ಉಸ್ತುವಾರಿಯನ್ನು ವಹಿಸಿಕೊಡುವುದು ಸೂಕ್ತ. ಅನ್ನತಕ್ಕಂತಹ ಮಾತನ್ನು ಹೇಳುತ್ತಾ, ಕೆಲಸ ಕೂಡ ಶೀಘ್ರವಾಗಿ ಆಗಬೇಕು. ಏಕೆಂದರೆ ನಮ್ಮದು ಕಪ್ಪು ಪಟ್ಟಿಯಲ್ಲಿರತಕ್ಕಂತಹ ಜಿಲ್ಲೆ. ಅಂತರ್ಜಲ ಇಡೀ ರಾಷ್ಟ್ರದಲ್ಲಿ ಹೆಚ್ಚು ಆಳಕ್ಕೆ ಹೋಗಿರತಕ್ಕಂತಹ ಜಿಲ್ಲೆ ಎನ್ನತಕ್ಕಂತಹ ಮಾಹಿತಿ ನಮಗೆಲ್ಲಾ ಗೊತ್ತಿದೆ. ಇವರು ವಿದ್ಯುದೀಕರಣ ಮಾಡುವುದರೊಳಗಾಗಿ ಕೊಳವೆ ಬಾವಿ ಬತ್ತಿ ಹೋಗುವಂತಹ ಸಂದರ್ಭವಿರುವುದರಿಂದ ಶೀಘ್ರವಾಗಿ ಆ ಕಾರ್ಯ ಆದರೆ ಒಂದೆರೆಡು ಬೆಳೆಗಳನ್ನಾದರೂ ತೆಗೆದುಕೊಳ್ಳಬಹುದೆಂಬ ಮಾತನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ.

ಶ್ರೀ ಡಿ.ಎ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ಹೇಳಿದ ರೀತಿಯಲ್ಲಿ ವಿದ್ಯುದೀಕರಣದ .....

ಶ್ರೀ. ಕೆ. ಅಭಯಚಂದ್ರ ಜೈನ್ :– ಒಂದೇ ಏಜೆನ್ಸಿಯವರಿಗೆ ಕೊಟ್ಟಿದ್ದಾರೆ.

ಶ್ರೀ. ಯು.ಟಿ. ಖಾದರ್: ಒಂದೇ ಏಜೆನ್ಸಿಯವರಿಗೆ ಕೊಟ್ಟಿರುವುದರಿಂದ ಅವರು ಪ್ರೈವೇಟ್ ಎರಡು ಬೋರ್‌ವೆಲ್ ಹೊಡೆಯುತ್ತಾರೆ, ಮೂರನೇ ಬೋರ್‌ವೆಲ್ ಹೊಡೆಯುವುದಿಲ್ಲ. ಅವರಿಗೆ ಒಂದು ವರ್ಷದಲ್ಲಿ ಮುಗಿಸುವುದಕ್ಕಾಗುವುದಿಲ್ಲ. Agency ಜಾಸ್ತಿ ಮಾಡಬೇಕು. ಒಬ್ಬರಿಗೆ Agency ಕೊಡುವಂತಹ ಅವಕಾಶವಾಗಬಾರದು.

ಅಧ್ಯಕ್ಷರು :– ಉತ್ತರ ಹೇಳಿ.

ಶ್ರೀ ಡಿ. ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೆಲ್ಲಾ ತೊಂದರೆಯಾಗಿದೆ ಎನ್ನುವುದು ನನ್ನ ಗಮನಕ್ಕೆ ತಂದರೆ, ನಾನು ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಅದರ ಬಗ್ಗೆ ತಕ್ಷಣ ಕಾರ್ಯಾಚರಣೆ ಮಾಡುವಂತಹ ಪ್ರಯತ್ನಗಳನ್ನು ಮಾಡುತ್ತೇನೆ. ಮಾನ್ಯ ಬಚ್ಚೇಗೌಡರು ಹೇಳಿರುವುದು ಸರಿಯಿದೆ. ಏಕೆಂದರೆ ವಿದ್ಯುದೀಕರಣದ್ದು ವಿಳಂಬವಾಗುತ್ತಿರುವುದನ್ನು ನಾವು ಎಲ್ಲಾ ಕಡೆಯೂ ಗಮನಿಸಿದ್ದೇವೆ. ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಸಭೆಯನ್ನು ಕರೆದು ವಿದ್ಯುಚ್ಛಕ್ತಿ ಇಲಾಖೆಯವರ ಜೊತೆ ಚರ್ಚಿಸಿ ತಕ್ಷಣ ವಿದ್ಯುತ್ ಕೊಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ವೆಂಕಟರಾವ್ ನಾಡಗೌಡ :– ಅವರು ಒಂದು ಆದೇಶವನ್ನು ಮಾಡಿದ್ದಾರೆ self execution ನಲ್ಲಿ ಮಾಡಿಕೊಂಡು ಬಿಡಿ ಎಂದು. ಅವರು ಇಲಾಖೆಯಿಂದ ಮಾಡುತ್ತಿಲ್ಲ. Self execution ನಲ್ಲಿ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಇದರಿಂದ ತೊಂದರೆಯಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ :– ಇದು ನಮ್ಮ ಗಮನಕ್ಕೂ ಬಂದಿದೆ. ಆದಕಾರಣ ಇದು ಆಗದೆ ಇರುವ ರೀತಿಯಲ್ಲಿ ಹೊಸ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ.

ಅಧ್ಯಕ್ಷರು :– ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿರವರು ನಿಮ್ಮ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ) :– ಮಾನ್ಯ ಅಧ್ಯಕ್ಷರೆ, ನನ್ನ ಎಲ್ಲಾ ಪ್ರಶ್ನೆಗಳಿಗೆ ಸಮಯವನ್ನು ಕೇಳುತ್ತಾರೆ. ತಾವು ನನ್ನ ರಕ್ಷಣೆಗೆ ಬರಬೇಕು. ನಾನು ಬಂದಿರುವುದೇ ಇಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ. ಹೋದ ಅಧಿವೇಶನದಲ್ಲೂ ನಾನು ಕೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು :– ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಪಾಟೀಲರೆ, ಇದು ಇಡೀ ರಾಜ್ಯದ ಎಲ್ಲಾ ಆಸ್ತಿಗೆ ಸಂಬಂಧಪಟ್ಟದ್ದು, ಬಿ.ಬಿ.ಎಂ.ಪಿ ಲಕ್ಷಗಟ್ಟಲೇ ಆಸ್ತಿ ಹೊಂದಿದೆ. ಬಿ.ಬಿ.ಎಂ.ಪಿ. ಸೇರಿ ಪ್ರಶ್ನೆ ಕೇಳಿದ್ದಾರೆ ಪಾಟೀಲರು. ಇಡೀ ರಾಜ್ಯದಲ್ಲಿನ ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳಬೇಕಾಗಿದೆ. ಕೇವಲ ಜಿಲ್ಲಾಧಿಕಾರಿಗಳಿಂದ ಮಾತ್ರವಲ್ಲ. ಬಿ.ಬಿ.ಎಂ.ಪಿ ಅಧಿಕಾರಿಗಳಿಂದ Regional Commissioner ಗಳಿಂದ ಕೂಡ ಎಲ್ಲಾ ಮಾಹಿತಿಗಳನ್ನು ತರಿಸಬೇಕಾಗಿದೆ.